**ಎಸ್.ಸಿ. ನಂ.4/2024**

**ದೋ.ಸಾ. : 01 ಪ್ರಾ.ಸಾ. : 03**

**ದಿನಾಂಕಃ 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳಿದ್ದು, ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

7. ಆರೋಪಿಗೆ ನಾನು ಬಾಡಿಗೆ ಮನೆ ಕೊಡುವಾಗ ಕರಾರು ಪತ್ರವನ್ನು ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಯಾರಿಗಾದರೂ ಮನೆಯನ್ನು ಬಾಡಿಗೆ ನೀಡುವಾಗ ಅವರ ಪೂರ್ವಾಪರ ವಿಚಾರಿಸಿ ಬಾಡಿಗೆ ನೀಡುತ್ತೇವೆ ಎಂದರೆ ಸರಿ. ದಿ.14-10-2023 ರಂದು ಚಾಸಾ-16 ಚಂದ್ರಹಾಸ ರವರೊಂದಿಗೆ ಆರೋಪಿಯೂ ಸಹ ಬಾಡಿಗೆ ಮನೆ ಕೇಳಲು ಬಂದಿದ್ದ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಯು ಮುಂಗಡ ಹಣ ರೂ.5,000/- ನೀಡಿದ್ದನು ಎಂದರೆ ಸಾಕ್ಷಿಯು ಚಾಸಾ-16 ರವರು ನೀಡಿದ್ದರು ಎಂದು ನುಡಿಯುತ್ತಾರೆ. ದಿ.17-10-2023 ರಂದು ಸಂಜೆ 7.15 ಗಂಟೆ ಸಮಯಕ್ಕೆ ನಾನು ಮನೆಯ ಅಂಗಳದಲ್ಲಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಯು ತನ್ನ ಹೆಂಡತಿಯೊಂದಿಗೆ ನಾವು ನೀಡಿದ ಬಾಡಿಗೆ ಮನೆಯಲ್ಲಿ ಜಗಳವಾಡಿಕೊಳ್ಳುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಮೃತ ನಂದಿನಿ ಕೂಗಾಡುತ್ತಿದ್ದ ಶಬ್ಧ ಕೇಳಿ, ನಾನು ಅವರ ಮನೆಯ ಬಳಿ ಹೋಗಿದ್ದೆ ಎಂದರೆ ಸರಿಯಲ್ಲ. ಆಗ ಆರೋಪಿಯು ತನ್ನ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ನಂದಿನಿಯನ್ನು ಓಡಿಸಿಕೊಂಡು ಬರುತ್ತಿದ್ದ ಎಂದರೆ, ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆಕೆ ಓಡಿ ಬರುವಾಗ ಈಗಾಗಲೇ ಅವಳಿಗೆ ಒಂದು ಕತ್ತಿಯಿಂದ ಕಡಿದ ಗಾಯವಾಗಿತ್ತು ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನಂದಿನಿ ಅಂಗಳಕ್ಕೆ ಓಡಿ ಬಂದಾಗ, ಆರೋಪಿಯು ಹಿಂದಿನಿಂದ ಓಡಿಸಿಕೊಂಡು ಬಂದು, ನಂದಿನಿಗೆ ಅಂಗಳದಲ್ಲಿ ಕತ್ತಿಯಿಂದ ಕಡಿದಿರುತ್ತಾನೆ ಎಂದರೆ

ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಆನಂತರ, ಆರೋಪಿ ನನ್ನನ್ನು ನೋಡಿ, ಕಂಪೌಂಡ್ ಹಾರಿ ಅಲ್ಲಿಂದ ಓಡಿ ಹೋಗಿರುತ್ತಾನೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

8. ಆ ಸಮಯದಲ್ಲಿ ನಾನು ಹಾಗೂ ಅಕ್ಕಪಕ್ಕದವರು ಸೇರಿ ನಂದಿನಿಯ ಹತ್ತಿರ ಬಂದು ನೋಡಿದಾಗ ಅವಳ ಗದ್ದದ ಕೆಳಭಾಗದಲ್ಲಿ ಗಾಯವಾಗಿ, ರಕ್ತ ಸೋರುತ್ತಿತ್ತು, ಹಣೆಯ ಹತ್ತಿರವೂ ಸಹ ಗಾಯವಾಗಿದ್ದು ಹಾಗೂ ಅವಳ ಉಸಿರು ನಿಂತುಹೋಗಿತ್ತು ಎಂದರೆ ಸರಿ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು, ಪೊಲೀಸರು ಬರೆದ ದೂರಿಗೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ನಾನು ಯಾವುದೇ ದಾಖಲೆಗಳಿಗೆ ಸಹಿ ಮಾಡುವಾಗ, ಅದನ್ನು ಓದಿ, ತಿಳಿದುಕೊಂಡು ನೋಡಿ ಸಹಿ ಮಾಡುತ್ತೇನೆ ಎಂದರೆ ಸರಿ. ಪೊಲೀಸರು ಶವ ಪಂಚನಾಮೆ ಮಾಡಿದಾಗ ಮೃತ ನಂದಿನಿಯ ಹಣೆಯ ಬಲಭಾಗದಲ್ಲಿ ಒಂದು ಇಂಚು ಉದ್ದದ ಗಾಯ, ಗದ್ದದ ಕೆಳಗೆ ಎರಡೂವರೆ ಇಂಚು ಉದ್ದದ ಗಾಯ ಹಾಗೂ ಅದರ ಕೆಳಗೆ ಒಂದೂವರೆ ಇಂಚು ಉದ್ದ ಮತ್ತು ಅರ್ಧ ಇಂಚು ಅಗಲ ಹಾಗೂ 1.2 ಸೆಂ.ಮೀ. ಆಳದ ಗಾಯ, ಕುತ್ತಿಗೆಯಲ್ಲಿ ಒಂದೂವರೆ ಇಂಚು ಉದ್ದ, ಅರ್ಧ ಇಂಚು ಅಗಲ ಮತ್ತು 1.5 ಸೆಂ.ಮೀ. ಆಳದ ಗಾಯಗಳಾಗಿದ್ದವು ಹಾಗೂ ಅವುಗಳು ಕತ್ತಿಯಿಂದ ಕತ್ತರಿಸಿದ ಗಾಯಗಳಾಗಿದ್ದವು ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಎದೆಯ ಭಾಗದಲ್ಲಿ ಒಂದೂವರೆ ಇಂಚು ಉದ್ದದ, ಅರ್ಧ ಇಂಚು ಅಗಲದ ಕತ್ತರಿಸಿದ ಗಾಯವಿತ್ತು ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಎದೆಯ ಕಳೆಭಾಗ ಹಾಗೂ ಹೊಟ್ಟೆಯ ಮೇಲೆ 6 ಸೆಂ.ಮೀ. ಉದ್ದ, 3 ಸೆಂ.ಮೀ. ಅಗಲದ ಕತ್ತರಿಸಿದ ಗಾಯ, ಅದರ ಕೆಳಗೆ 3.5 ಸೆಂ.ಮೀ. ಉದ್ದದ ಕತ್ತರಿಸಿದ ಗಾಯ ಹಾಗೂ ಈ ಗಾಯಗಳ ಪಕ್ಕದಲ್ಲಿ ದುಂಡುಗಾಯಗಳಾಗಿದ್ದವು, ಸೊಂಟದ ಎಡಭಾಗದಲ್ಲಿ 2.ಸೆಂ.ಮೀ. ಉದ್ದ ಹಾಗೂ 1 ಸೆಂ.ಮೀ. ಅಗಲದ ಕತ್ತರಿಸಿದ ಗಾಯಗಳಾಗಿದ್ದವು ಎಂದರೆ ಸಾಕ್ಷಿಯು, ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಶವಪಂಚನಾಮೆಯ ಕಾಲದಲ್ಲಿ ಪೊಲೀಸರು ರಕ್ತದ ಮಾದರಿಯನ್ನು ಸಂಗ್ರಹಿಸಲು, ಬಿಳಿ ಬಟ್ಟೆಯಿಂದ ಸಂಗ್ರಹಿಸಿದ ರಕ್ತದ ಮಾದರಿ ಮತ್ತು ಬಿಳಿ ಬಟ್ಟೆಯ ಸಣ್ಣ ತುಂಡನ್ನು ಕವರಿನಲ್ಲಿ

ಸಂಗ್ರಹಿಸಿದರು ಹಾಗೂ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣನ್ನು ಹಾಗೂ ರಕ್ತ ಮಿಶ್ರಿತವಲ್ಲದ ಸಾದಾ ಮಣ್ಣನ್ನು ಜಪ್ತುಪಡಿಸಿಕೊಂಡರು ಎಂದರೆ ಸರಿ.

9. ಪೊಲೀಸರು ಸ್ಥಳ ಪಂಚನಾಮೆಗೆ ಬಂದಾಗ, ಪೊಲೀಸರಿಗೆ ನಾನೇ ಆರೋಪಿಯು ಬಾಡಿಗೆಗೆ ವಾಸವಾಗಿದ್ದ ಮನೆಯನ್ನು ತೋರಿಸಿದ್ದೆನು ಎಂದರೆ ಸರಿ. ಸದರಿ ಮನೆಗೆ ಬೀಗ ಹಾಕಲಾಗಿತ್ತು ಎಂದರೆ ಸರಿ. ಸದರಿ ಬಾಡಿಗೆ ಮನೆಯ ನಂ.95/2 ಆಗಿತ್ತು ಹಾಗೂ ವಿದ್ಯುತ್ ಮೀಟರ್ ಮೇಲೆ ಕೆ.ಎಲ್. 894 ಎಂದು ಬರೆಯಲಾಗಿದೆ ಎಂದರೆ ಸರಿ.

**(ಈ ಹಂತದಲ್ಲಿ ಪಿ.ಪಿ. ರವರು ಒಂದು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಕತ್ತಿಯನ್ನು ತೋರಿಸಿ, ಆರೋಪಿ ಇದೇ ಕತ್ತಿಯಿಂದ ಮೃತ ನಂದಿನಿಯನ್ನು ಕಡಿದು ಕೊಲೆ ಮಾಡಿರುತ್ತಾನೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಆರ್.ವಿ.ಎನ್. ವಕೀಲರಿಂದಃ-**

10. ನಾನು ಸ್ಥಳಕ್ಕೆ ಹೋದಾಗ, ಅಲ್ಲಿ ಬಹಳಷ್ಟು ಜನರು ಸೇರಿದ್ದರು ಎಂದರೆ ಸರಿ. ನಂದಿನಿ ಹೇಗೆ ಮೃತಪಟ್ಟಿರುತ್ತಾಳೆ ಎಂದು ನಾನು ನೋಡಿರುವುದಿಲ್ಲ. ಪೊಲೀಸರು ನನ್ನಿಂದ ಖಾಲಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಗಳಲ್ಲಿ ಏನು ಬರೆದಿರುತ್ತಾರೆ ಮತ್ತು ದೂರಿನಲ್ಲಿಯೂ ಸಹ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಫೋಟೊಗಳನ್ನೂ ಸಹ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ, ಪೊಲೀಸರು ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಾನು ಪಿಗ್ಮಿ

ಕಲೆಕ್ಷನ್‌ಗೆ ಬೆಳಿಗ್ಗೆ ಹೋದರೆ ರಾತ್ರಿ 8.30ರ ನಂತರ ಬರುತ್ತೇನೆ. ಈ ಪ್ರಕರಣಕ್ಕೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ